ಬೀದರ್ ತಾಲ್ಲೂಕಿನಲ್ಲಿರುವ ಒಟ್ಟು ಸಣ್ಣ ನೀರಾವರಿ ಇಲಾಖೆಯ ಕೆರೆಗಳ ಬಗ್ಗೆ

5098 - ಶ್ರೀ ರಮೇಶ್ ಕುಮಾರ್ ಪಾಂಡೆ (ಬೀದರ್) : ಮಾನ್ಯ ಸಣ್ಣ ನೀರಾವರಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೀದರ್ ತಾಲ್ಲೂಕಿನಲ್ಲಿರುವ ಒಟ್ಟು ಸಣ್ಣ ನೀರಾವರಿ ಇಲಾಖೆಯ ಕೆರೆಗಳ ಸಂಖ್ಯೆ ಎಷ್ಟು?

ಆ) ಹೂಸ ಕೆರೆಗಳನ್ನು ಮಂಜೂರು ಮಾಡಲಾಗುವುದೆ? ಹಾಗಿದ್ದಲ್ಲಿ ಮಂಜೂರು ಮಾಡಲಾಗುವ ಕೆರೆಗಳ ಸಂಖ್ಯೆ ಎಷ್ಟು ಮತ್ತು ಎಲ್ಲೆಲ್ಲಿ?

ಇ) ಅಕ್ಟೋಬರ್ 99 ರಿಂದ ಅಕ್ಟೋಬರ್ 2000ರವರೆಗೆ ಆಯವ್ಯಯದಲ್ಲಿ ಕೆರೆಗಳ ಅಭಿವೃದ್ಧಿಗಾಗಿ ಮೀಸಲಿಟ್ಟಿರುವ ಹಣವೆಷ್ಟು? ಅದರಲ್ಲಿ ಬಿಡುಗಡೆ ಮಾಡಲಾದ ಹಣವೆಷ್ಟು?

ಈ) ಕೆಲಸಗಳನ್ನು ಟೆಂಡರ್ ರೂಪದಲ್ಲಿ ಮತ್ತು ತುಂಡು ಗುತ್ತಿಗೆ ರೂಪದಲ್ಲಿ ನೀಡಿರುವ ಕಾಮಗಾರಿಗಳೆಷ್ಟು? ಸಂಪೂರ್ಣ ಮಾಹಿತಿಯನ್ನು ನೀಡುವುದು?

ಉ) ಎಲ್ಲಾ ಕಾಮಗಾರಿ ಕೆಲಸವನ್ನು ಟೆಂಡರ್ ಮೂಲಕ ಮಾಡುತ್ತಿರುವುದರಿಂದ ತುಂಡು ಗುತ್ತಿಗೆ ಕಾಮಗಾರಿ ಮಾಡಲು ಸರ್ಕಾರ ಅನುಮತಿ ನೀಡುವುದೆ?

ಶ್ರೀ ಎಸ್. ಕುಮಾರ್ ಬಂಗಾರಪ್ಪ (ಸಣ್ಣ ನೀರಾವರಿ ರಾಜ್ಯ ಸಚಿವರು) :

ಅ) ಸಣ್ಣ ನೀರಾವರಿ ಕೆರೆಗಳ ಸಂಖ್ಯೆ 26

ಆ) ಹೂಸ ಕೆರೆಗಳನ್ನು ನಿರ್ಮಾಣ ಮಾಡಲಾಗುವುದು ಸದ್ಯಕ್ಕೆ ಬೀದರ್ ತಾಲ್ಲೂಕಿನಲ್ಲಿ ಅಷ್ಟೂರ ಗ್ರಾಮದ ಹೊಸ ಕೆರೆಯ ನಿರ್ಮಾಣ ಮಾಡಲಾಗುತ್ತಿದೆ. ಇದಲ್ಲದೆ ಬೀದರ್ ಮತ ಕ್ಷೇತ್ರಕ್ಕೆ ಸಂಬಂಧಪಟ್ಟಂತೆ ಆಯವ್ಯಯದಲ್ಲಿ ಸಾಂಕೇತಿಕ ಅನುದಾನ ಹೊಂದಿರುವ 5 ಕಾಮಗಾರಿಗಳಿದ್ದು ಇವುಗಳಿಗೆ ಸಾಕಷ್ಟು ಅನುದಾನ ಇಲ್ಲದಿರುವುದರಿಂದ ಮಂಜೂರಾತಿ ನೀಡಲು ಸಾಧ್ಯವಾಗುವುದಿಲ್ಲ.

ಇ) ಪ್ರಸ್ತುತ ವರ್ಷದಲ್ಲಿ 4.50 ಲಕ್ಷ ರೂ. ಅನುದಾನವಿದ್ದು ಇದುವರೆಗೆ ಯಾವುದೇ ವೆಚ್ಚವಾಗಿರುವುದಿಲ್ಲ.

ಈ) ಬೀದರ್ ಮತಕ್ಷೇತ್ರದಲ್ಲಿ 1999-2000ರಲ್ಲಿ ಟೆಂಡರ್ ಮೂಲಕ ಕೈಗೊಂಡ ಒಂದು ಕಾಮಗಾರಿ ಎಂದರೆ ಅಷ್ಟೂರ ಗ್ರಾಮದ ಸಣ್ಣ ನೀರಾವರಿ ಕೆರೆ ನಿರ್ಮಾಣ. ಈ ಮತಕ್ಷೇತ್ರದಲ್ಲಿ ತುಂಡು ಗುತ್ತಿಗೆಯ ಮೂಲಕ ಯಾವುದೇ ಕಾಮಗಾರಿ ಕೈಗೊಂಡಿಲ್ಲ.

ಉ) ಇಲ್ಲ.

ಬೀದರ್ ತಾಲ್ಲೂಕಿನ ಚಿಮಕೋಡ ಗ್ರಾಮದ ಕೆರೆ ದುರಸ್ತಿ

5099 - ಶ್ರೀ ರಮೇಶ್ ಕುಮಾರ್ ಪಾಂಡೆ (ಬೀದರ್) : ಮಾನ್ಯ ಸಣ್ಣ ನೀರಾವರಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೀದರ್ ತಾಲ್ಲೂಕಿನ ಚಿಮಕೊಡ ಗ್ರಾಮದಲ್ಲಿ ಕೆರೆ ಒಡೆದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ?

ಆ) ಬಂದಿದ್ದಲ್ಲಿ ಈ ಕೆಲಸವನ್ನು ಯಾವಾಗ ಪ್ರಾರಂಭಿಸಲಾಗುವುದು?

ಇ) ಕೆರೆ ಒಡೆದಿರುವುದರಿಂದ 50 ಎಕರೆ ಹೊಲ ಮುಳುಗಿ ಹೋಗಿದ್ದು 10 ಬಾವಿ ಮುಚ್ಚಿಹೋಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ?

ಈ) ಹಾಗಿದ್ದಲ್ಲಿ ಇದುವರೆಗೂ ಎಷ್ಟು ಜನರಿಗೆ ಪರಿಹಾರ ನೀಡಲಾಗಿದೆ ಮತ್ತು ಯಾವ ರೂಪದಲ್ಲಿ ನೀಡಲಾಗಿದೆ?

ಉ) ಪರಿಹಾರ ನೀಡದಿದ್ದಲ್ಲಿ ಕಾರಣಗಳೇನು? ಮತ್ತು ಎಂದಿನಿಂದ ಪರಿಹಾರ ನೀಡಲಾಗುವುದು

ಶ್ರೀ ಎಸ್. ಕುಮಾರ್ ಬಂಗಾರಪ್ಪ (ಸಣ್ಣ ನೀರಾವರಿ ರಾಜ್ಯ ಸಚಿವರು) :

ಅ) ಬಂದಿದೆ.

ಆ) ಕೆರೆಯ ದುರಸ್ತಿಗಾಗಿ ರೂ. 79.50 ಲಕ್ಷಗಳ ಅಂದಾಜು ಪತ್ರಿಕೆ ತಯಾರಿಸಲಾಗಿದ್ದು ಪರಿಶೀಲಿಸಿ ಹಣದ ಲಭ್ಯತೆಯನ್ವಯ ದುರಸ್ತಿ ಕೆಲಸ ಪ್ರಾರಂಭಿಸಲು ಕ್ರಮ ತೆಗೆದುಕೊಳ್ಳಲಾಗುವುದು.

ಇ) ಸುಮಾರು 112.00 ಎಕರೆ ಸಾಗುವಳಿ ಜಮೀನು ಹಾನಿಗೊಳಗಾಗಿದೆ. ತೆರೆದ ಬಾವಿಗಳು ಹಾನಿಯಾಗಿರುವುದಿಲ್ಲ.

ಈ) 69 ರೈತರಿಗೆ ಒಟ್ಟು 23,000-00 ಗಳನ್ನು ಕಂದಾಯ ಅಧಿಕಾರಿಗಳಿಂದ ಪರಿಹಾರ ಧನವನ್ನು ನೀಡಲಾಗಿದೆ.

ಉ) ಉದ್ಭವಿಸುವುದಿಲ್ಲ.

ಬೆಂಗಳೂರಿನ ಕೆಂಗಲ್ ಹನುಮಂತಯ್ಯ ರಸ್ತೆಯ ಮೇಲು ಸೇತುವೆ ಕಾಮಗಾರಿ

5100 - ಶ್ರೀ ರಾಮಲಿಂಗಾ ರೆಡ್ಡಿ (ಜಯನಗರ) : ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಂಗಳೂರಿನ ಕೆಂಗಲ್ ಹನುಮಂತಯ್ಯ ರಸ್ತೆಯಿಂದ ರಿಚ್ಮಂಡ್ ವೃತ್ತದವರೆಗೆ ಮೇಲು ಸೇತುವೆ ಕಾಮಗಾರಿಯನ್ನು ಯಾವಾಗ ಪ್ರಾರಂಭಿಸಲಾಯಿತು?

ಆ) ಇದರ ಅಂದಾಜು ವೆಚ್ಚವೆಷ್ಟು?

ಇ) ಈ ಕಾಮಗಾರಿಯನ್ನು ಯಾರಿಗೆ ಗುತ್ತಿಗೆ ನೀಡಲಾಗಿದೆ?

ಈ) ಈ ಕಾಮಗಾರಿ ಯಾವಾಗ ಪೂರ್ಣಗೊಳ್ಳಬೇಕಾಗಿತ್ತು?

ಉ) ಈ ಕಾಮಗಾರಿಗಾಗಿ ಇಲ್ಲಿಯವರೆಗೆ ಖರ್ಚಾಗಿರುವ ಹಣವೆಷ್ಟು?

ಊ) ಈ ಕಾಮಗಾರಿಯ ವಿಳಂಬಕ್ಕೆ ಕಾರಣಗಳೇನು?